ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH
ಪತ್ರಿಕಾ ತುಣುಕುಗಳು
PAPER CLIPPINGS
ಇಲಾಖೆ / ವಿಷಯ : DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER:
ದಿನಾಂಕ : DATE : 9-12-2020

### ಡಾರ್ಕ್‌ವೆಬ್ ಮೂಲಕ ಡ್ರಗ್ಸ್ ಮಾರಾಟ, ಮಾನವ ಕಳ್ಳಸಾಗಾಣಿಕೆ ಸಕ್ರಿಯ; 21 ಡಾರ್ಕ್‌ವೆಬ್ ಪತ್ತೆ

# ಪೊಲೀಸ್ ಕಾಯ್ದೆಗೆ ತಿದ್ದುಪಡಿ: ಬೊಮ್ಮಾಯಿ

ವಿಧಾನಸಭೆ: ರಿಕ್ರಿಯೆಷನ್ ಕ್ಲಬ್ ಹೆಸರಿನಲ್ಲಿ ಜೂಜಾಟ ನಡೆಸುವುದನ್ನು ತಡೆಗಟ್ಟಲು ಹಾಗೂ ಜೂಜಾಟವನ್ನು ಶಿಕ್ಷಾರ್ಹ ಅಪರಾಧ ಎಂದು ಪರಿಗಣಿಸಲು ರಾಜ್ಯ ಪೊಲೀಸ್ ಕಾಯ್ದೆಗೆ ತಿದ್ದುಪಡಿ ತರಲಾಗುವುದು ಎಂದು ಗೃಹ ಸಚಿವ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.



ವಿಧಾನಸಭೆಯಲ್ಲಿ ಪ್ರಶ್ನೋತ್ತರ ವೇಳೆಯಲ್ಲಿ ಕಾಂಗ್ರೆಸ್ ಸದಸ್ಯ ಈಶ್ವರ್ ಖಂಡ್ರೆ ಕೇಳಿದ ಪ್ರಶ್ನೆಗೆ ಉತ್ತರಿಸಿ, ರಾಜ್ಯ ಸರ್ಕಾರ ಮಾದಕ ವಸ್ತುಗಳ ವಿರುದ್ಧ ಸಮರ ಸಾರಿದೆ. ಈ ವರ್ಷ ದಾಖಲಾದ 3,852 ಪ್ರಕರಣಗಳ ಪೈಕಿ 2,255 ಪ್ರಕರಣಗಳಲ್ಲಿ ಚಾರ್ಜ್‌ಶೀಟ್ ದಾಖಲಿಸಲಾಗಿದೆ. ಇದುವರೆಗೂ ಎಫ್‌ಎಸ್‌ಎಲ್ ವರದಿ ಬರುವುದು ತಡವಾಗುತ್ತಿತ್ತು. ಈಗ ಒಂದೇ ಸಾರಿ 51 ಸ್ಯಾಂಪಲ್ ಪರೀಕ್ಷೆಗೆ ಅವಕಾಶ ಇದೆ. ಮುಂದಿನ 6 ತಿಂಗಳಲ್ಲಿ ರಾಜ್ಯದ 5 ಕಡೆ ಎಫ್‌ಎಸ್‌ಎಲ್ ಪ್ರಯೋಗಾಲಯಗಳನ್ನು ಮೇಲ್ದರ್ಜೆಗೇರಿಸಲಾಗುವುದು ಎಂದು ಹೇಳಿದರು.

> ರಾಜ್ಯ ಸರ್ಕಾರ ಡ್ರಗ್ಸ್ ಮಾರಾಟ ಮಾಡುವವರ ಮೇಲೆ ಮರಣ ದಂಡನೆ ಅಥವಾ ಜೀವಾವಧಿ ಶಿಕ್ಷೆಗೆ ಗುರಿಪಡಿಸಲು ಕಾಯ್ದೆಗೆ ತಿದ್ದುಪಡಿ ತರಬೇಕು. ಇಲ್ಲದಿದ್ದರೆ, ಮುಂದಿನ ಪೀಳಿಗೆಯನ್ನು ನಾವೇ ಡ್ರಗ್ಸ್ ಲೋಕಕ್ಕೆ ತಳ್ಳಿದಂತಾಗುತ್ತದೆ.
>
> • **ಈಶ್ವರ್ ಖಂಡ್ರೆ,** ಕಾಂಗ್ರೆಸ್ ಶಾಸಕ

ಗಡಿ ಜಿಲ್ಲೆಗಳಾದ ಬೀದರ್, ಕಲಬುರಗಿ, ರಾಯಚೂರುಗಳಲ್ಲಿ ರಿಕ್ರಿಯೆಷನ್ ಕ್ಲಬ್ ಹೆಸರಿನಲ್ಲಿ ಜೂಜು ಪ್ರಕರಣಗಳು ಹೆಚ್ಚುತ್ತಿವೆ. ಜೂಜಾಟವನ್ನು ಶಿಕ್ಷಾರ್ಹ ಅಪರಾಧ ಎಂದು ಪರಿಗಣಿಸಲು ರಾಜ್ಯ ಪೊಲೀಸ್ ಕಾಯ್ದೆಗೆ ತಿದ್ದುಪಡಿ ತರಲಾಗುವುದು. ರಿಕ್ರಿಯೇಷನ್ ಕ್ಲಬ್‌ಗಳನ್ನು ಹೈಕೋರ್ಟ್ ಆದೇಶ ಇಟ್ಟುಕೊಂಡು ತೆರೆಯಲಾಗುತ್ತಿದೆ. ಅದನ್ನು ನಿಯಂತ್ರಿಸಲು ಪೊಲೀಸ್ ಕಾಯ್ದೆಗೆ ತಿದ್ದುಪಡಿ ತರಲಾಗುವುದು ಎಂದು ಹೇಳಿದರು.

> ಮೈಸೂರಿನಲ್ಲಿ ಹುಕ್ಕಾ ಸೆಂಟರ್‌ಗಳು ನಾಯಿಕೊಡೆಗಳಂತೆ ತಲೆ ಎತ್ತುತ್ತಿವೆ. ವಿದ್ಯಾರ್ಥಿಗಳು ಅದರ ದಾಸರಾಗುತ್ತಿದ್ದಾರೆ. ಮುಂದೆ ಅವರೇ ಡ್ರಗ್ಸ್ ಸೇವಿಸುತ್ತಾರೆ. ಹುಕ್ಕಾ ಕೇಂದ್ರಗಳನ್ನು ರದ್ದು ಪಡಿಸಲು ಕ್ರಮ ಕೈಗೊಳ್ಳಿ.
>
> • **ನಾಗೇಂದ್ರ,** ಕಾಂಗ್ರೆಸ್ ಶಾಸಕ

**ಡಾರ್ಕ್ ವೆಬ್ ಪತ್ತೆ:** ಅಕ್ರಮವಾಗಿ ಡಾರ್ಕ್ ವೆಬ್ ಮೂಲಕ ಡ್ರಗ್ಸ್ ಮಾರಾಟ ಮಾಡುತ್ತಿರುವುದನ್ನು ರಾಜ್ಯ ಸರ್ಕಾರ ಬೇಧಿಸಿದ್ದು 21 ಡಾರ್ಕ್ ವೆಬ್ ಪೋರ್ಟಲ್‌ಗಳನ್ನು ಪತ್ತೆಹಚ್ಚಲಾಗಿದೆ. ಡಾರ್ಕ್ ವೆಬ್‌ಗಳ ಮೂಲಕ ಮಾನವ ಮಾರಾಟ ಜಾಲವೂ ಸಕ್ರಿಯವಾಗಿದೆ. ಅಕ್ರಮ ಡ್ರಗ್ಸ್ ಮಾರಾಟ ಮಾಡುವವರ ವಿರುದ್ಧ ಈಗಿರುವ ಎನ್‌ಡಿಪಿಎಸ್ ಕಾಯ್ದೆ ದುರ್ಬಲವಾಗಿದ್ದು ಅದನ್ನು ಬಲಗೊಳಿಸಲು ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಲಾಗುವುದು ಎಂದರು.

> ಕಲಬುರಗಿಯಲ್ಲಿ ಹೊಸದಾಗಿ ನಾಲ್ಕು ರಿಕ್ರಿಯೇಷನ್ ಕ್ಲಬ್‌ಗೆ ಗೃಹ ಇಲಾಖೆ ಪರವಾನಗಿ ನೀಡಿದೆ. ಅಲ್ಲಿ ಜೂಜಾಟ ಮುಕ್ತವಾಗಿ ನಡೆಯುತ್ತಿದೆ. ಅದನ್ನು ಮೊದಲು ರದ್ದುಗೊಳಿಸಿ, ಹೊಸ ಪರವಾನಗಿ ನೀಡುವುದನ್ನು ನಿಲ್ಲಿಸಿ.
>
> • **ಪ್ರಿಯಾಂಕ್ ಖರ್ಗೆ,** ಕಾಂಗ್ರೆಸ್ ಶಾಸಕ

ಬೀದರ್‌ನಲ್ಲಿ ಅರಣ್ಯ ಇಲಾಖೆ ಅಧಿಕಾರಿಗಳೇ ಗಾಂಜಾ ಬೆಳೆದಿದ್ದಾರೆಂಬ ಆರೋಪಕ್ಕೆ ಉತ್ತರಿಸಿದ ಸಚಿವರು, ಅಧಿಕಾರಿಗಳು ಗಾಂಜಾ ಬೆಳೆದಿರುವ ಪ್ರಕರಣದಲ್ಲಿ ಶಾಮೀಲಾಗಿದ್ದರೆ ಅವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗುವುದು. ಅದೇ ರೀತಿ ಹುಬ್ಬಳ್ಳಿ-ಧಾರವಾಡದಲ್ಲಿ ಸ್ಟೇಶನರಿ ಶಾಪ್‌ಗಳಲ್ಲಿ ವೈಟ್ನರ್ ಮಾರಾಟ ಮಾಡುವುದು, ಮೈಸೂರಿನಲ್ಲಿ ಹುಕ್ಕಾ ಬಾರ್‌ಗಳನ್ನು ನಡೆಸುವುದರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.